ಬಿ.ಪ್ಯಾಕ್
ಅಂದದೂರು ಬೆಂಗಳೂರು

ELECTION HABBA
#LetsMakeDemocracyWork

# ಬೆಂಗಳೂರು ನಗರಕ್ಕಾಗಿ ನಾಗರಿಕ ಪ್ರಣಾಳಿಕೆ

Mobility & Infrastructure | Waste management | Governance | Water & Sanitation | Women & Child

ಏಪ್ರಿಲ್ 2018

# ಮುನ್ನುಡಿ

ಜಾಗತಿಕ ಮಟ್ಟದಲ್ಲಿ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿರುವ ಕರ್ನಾಟಕ ರಾಜ್ಯದ ರಾಜಧಾನಿ 'ನಮ್ಮ ಬೆಂಗಳೂರು', ರಾಜ್ಯ ಮತ್ತು ದೇಶ ಎರಡರ ಆರ್ಥಿಕ ಸಮೃದ್ಧಿಗೆ ನಿರ್ಣಾಯಕ ನಗರವಾಗಿ ಪ್ರಗತಿ ಕಂಡಿದೆ. ಈ ಬೆಳವಣಿಗೆಯು ದೇಶದ ದೂರದ ಮೂಲೆಗಳಿಂದ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿಭೆಗಳನ್ನು ಆಕರ್ಷಿಸುತ್ತಿದೆ. ಅಗಾಧವಾದ ನಗರದ ಜನಸಂಖ್ಯೆಯು ಕಾಸ್ಮೋಪಾಲಿಟನ್ ಸ್ವಭಾವವನ್ನು ಮೈಗೂಡಿಸಿಕೊಂಡಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧವಾಗಿದೆ

ವೇಗದ ಗತಿಯ ಬೆಳವಣಿಗೆಯಿಂದಾಗಿ ನಗರ ಹಲವು ಸಮಸ್ಯೆಗಳಿಗೂ ಕಾರಣವಾಗಿದೆ. ನಗರದಲ್ಲಿ ಈಗಿರುವ ಪ್ರಸ್ತುತ ಮೂಲಸೌಕರ್ಯಗಳು ಬೆಳೆಯುತ್ತಿರುವ ನಗರಕ್ಕೆ ಅವಶ್ಯವಾದಷ್ಟು ಚಲನಶೀಲತೆ, ಇಂಧನ, ರಸ್ತೆಗಳು, ನೀರು, ಪರಿಸರ ಮತ್ತು ಇತರ ಸೇವೆಗಳ ಬೇಡಿಕೆಯ ಸಾಮರ್ಥ್ಯವನ್ನು ಮೀರಿಸುತ್ತದೆ. ಅಂತಹ ಸೌಕರ್ಯಗಳ ಬಗ್ಗೆ ನಮ್ಮಲ್ಲಿನ ಊಹೆಗಳನ್ನು ಪರಿಷ್ಕರಿಸಲು ನಿರಂತರ ಅಗತ್ಯತೆಯಿರುತ್ತದೆ ಮತ್ತು ಪ್ರತಿಕ್ರಿಯಾತ್ಮಕಪರವಾದ ಬದಲಾವಣೆಗಳನ್ನು ತರುವ ಅವಶ್ಯಕತೆಯಿರುತ್ತದೆ.

ಮುಂದಿನ ಐದು ವರ್ಷಗಳು (2018-2022) ರಾಜ್ಯದ ವ್ಯವಹಾರಗಳನ್ನು ನಡೆಸುವ ಮುಂದಿನ ರಾಜಕೀಯ ರಚನೆಯನ್ನು ನಿರ್ಧರಿಸಲು ಕರ್ನಾಟಕ ಚುನಾವಣೆಗಳು ನಿಗದಿಯಾಗಿದೆ. ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬರಲು ಮತ್ತು ಭವಿಷ್ಯದಲ್ಲಿ ಹಮ್ಮಿ ಕೊಳ್ಳುವ ಯೋಜನೆಗಳ ಬಗ್ಗೆ ಬಿಂಬಿಸುವ ಸಮಯ ಇದು. ರಾಜಕೀಯ ಪಕ್ಷಗಳ ಅಂತಹ ಆಲೋಚನೆಗಳು ಸಾಮಾನ್ಯವಾಗಿ 'ಪ್ರಣಾಳಿಕೆ'ಯಲ್ಲಿ ರೂಪುಗೊಂಡು, ಚುನಾವಣೆಗೆ ಮುಂಚೆಯೇ ಹೊರಹೊಮ್ಮುತ್ತದೆ. ರಾಜ್ಯ ಮತ್ತು ನಗರಕ್ಕೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳ ಭವಿಷ್ಯದ ದೃಷ್ಟಿ ನಾಗರಿಕರಿಗೆ ಗೋಚರಿಸುತ್ತದೆ.

ಈ ಹಿನ್ನೆಲೆಯಲ್ಲಿ ಬಿ.ಪ್ಯಾಕ್ ಬೆಂಗಳೂರಿನ ಸಮಸ್ಯೆಗಳನ್ನು ಗುರುತಿಸಲು ಹಲವಾರು ತಿಂಗಳವರೆಗೆ ನಾಗರಿಕರು ಮತ್ತು ತಜ್ಞರ ಜೊತೆ ತೊಡಗಿಕೊಂಡಿತು. ಸರ್ಕಾರವು ಕಾರ್ಯನಿರ್ವಹಿಸಬೇಕಾದ ಉನ್ನತ ಪರಿಣಾಮಗಳನ್ನು ಹೊಂದಿದ ಐದು ಆದ್ಯತಾ ವಿಷಯಗಳನ್ನು ಗುರುತಿಸುವುದು ಮೊದಲ ಹಂತದಲ್ಲಿ ತೆಗೆದುಕೊಂಡ ಪ್ರಕ್ರಿಯೆಯಾಗಿದೆ. ನಾಗರಿಕ ಗ್ರಹಿಕೆ ಸಮೀಕ್ಷೆಯ ಮೂಲಕ ಈ ಐದು ವಿಷಯಗಳನ್ನು ಗುರುತಿಸಲಾಗಿದೆ: ಆಡಳಿತ, ಚಲನಶೀಲತೆ, ಘನ ತ್ಯಾಜ್ಯ ನಿರ್ವಹಣೆ, ನೀರು ಹಾಗೂ ಮಹಿಳಾ ಮತ್ತು ಮಕ್ಕಳ ಸುರಕ್ಷತೆ ಈ ಐದು ಆದ್ಯತಾ ವಲಯಗಳಾಗಿವೆ.

ನಂತರ, ಬಿ.ಪ್ಯಾಕ್ ಗುರುತಿಸಲ್ಪಟ್ಟ ಪ್ರತಿ ವಿಷಯಗಳಿಗೆ ಸಂಬಂಧಿಸಿದಂತೆ ತಜ್ಞರ ಜೊತೆ ಕೇಂದ್ರೀಕೃತ ಗುಂಪು ಚರ್ಚೆಯನ್ನು ನಡೆಸಿತು. ಈ ಚರ್ಚೆಗಳ ಫಲಿತಾಂಶವನ್ನು ದಾಖಲಿಸಲಾಗಿದೆ ಮತ್ತು ಲಗತ್ತಿಸಲಾಗಿದೆ. ನಗರದ ದೀರ್ಘಕಾಲದ ಅಗತ್ಯತೆಗಳನ್ನು ಪೂರೈಸಲು ತಜ್ಞರು ಸೂಕ್ಷ್ಮ ಶಿಫಾರಸುಗಳನ್ನು ಮಾಡಿದ್ದಾರೆ. ಈ ಶಿಫಾರಸುಗಳನ್ನು ರಾಜಕೀಯ ಪಕ್ಷಗಳು

ತಮ್ಮ ಚುನಾವಣ ಪ್ರಣಾಳಿಕೆಯಲ್ಲಿ ಸೇರಿಸಿಕೊಳ್ಳಬೇಕೆಂದು ನಾವು ಮನಃಪೂರ್ವಕವಾಗಿ ವಿನಂತಿಸುತ್ತೇವೆ. ಏಕೆಂದರೆ ಈ ಶಿಫಾರಸುಗಳು ಚುನಾವಣೆಯ ನಂತರದ ಕ್ರಮಕ್ಕೆ ಆಧಾರವಾಗಿ ಪರಿಣಮಿಸುತ್ತದೆ.

ಇದಲ್ಲದೆ, ಬಿ.ಪ್ಯಾಕ್ ಈ ವಿಷಯಗಳ ಮೇಲೆ ವಿವಿಧ ಭೌಗೋಳಿಕ ಪ್ರದೇಶಗಳ ಭಾವನೆ ಹಾಗೂ ಅಗತ್ಯಗಳನ್ನು ಗುರುತಿಸುವ ದೃಷ್ಟಿಯಿಂದ ನಾಗರಿಕ ಗುಂಪುಗಳು ಮತ್ತು ಸ್ಥಳೀಯ ಪ್ರದೇಶದ ಮುಖಂಡರೊಂದಿಗೆ ನಗರದ ಹದಿನಾರು ವಿಧಾನಸಭಾ ಕ್ಷೇತ್ರಗಳಲ್ಲಿ ಚರ್ಚೆಗಳನ್ನು ನಡೆಸಿತು. ಈ ಚರ್ಚೆಗಳಿಂದ ಹೊರ ಹೊಮ್ಮಿದ ಆವಿಷ್ಕಾರಗಳನ್ನು ಸೂಕ್ಷ್ಮ ಪ್ರಣಾಳಿಕೆ ಎಂದು ದಾಖಲಿಸಲಾಗಿದೆ. ಬೆಂಗಳೂರು ನಗರಕ್ಕಾಗಿ ವಿಧಾನಸಭಾ ಪ್ರಣಾಳಿಕೆಯಲ್ಲಿ ಈ ಶಿಫಾರಸುಗಳನ್ನು ಸೇರಿಸಿಕೊಳ್ಳಲು ಪರಿಗಣಿಸಬೇಕಾಗಿ ಕೋರುತ್ತೇವೆ.

ಈ ಪ್ರಯತ್ನಗಳೊಂದಿಗೆ ಬಿ.ಪ್ಯಾಕ್ ಆಡಳಿತ ಸಮಸ್ಯೆಗಳಲ್ಲಿ ಪಾಲ್ಗೊಳ್ಳುವಿಕೆಯ ಪ್ರಕ್ರಿಯೆಯ ಮೂಲಕ ಜನರನ್ನು ಹತ್ತಿರಕ್ಕೆ ತರುವ ಕೆಲಸ ಮಾಡಿದೆ. ನಿಮ್ಮ ಪ್ರಣಾಳಿಕೆಯಲ್ಲಿ ಈ ಶಿಫಾರಸುಗಳನ್ನು ಅಳವಡಿಸಿಕೊಳ್ಳುವ ನಿಮ್ಮ ಪ್ರಯತ್ನವು ಜನರ ಆಕಾಂಕ್ಷೆಗಳನ್ನು ಗುರುತಿಸುವಲ್ಲಿ ಹಾಗೂ ರಾಜಕೀಯ ವ್ಯವಸ್ಥೆಯೊಂದಿಗೆ ಹೆಚ್ಚು ಅರ್ಥಪೂರ್ಣ ಸಂಭಾಷಣೆಯಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಿದಂತಾಗುತ್ತದೆ. ಇಂತಹ ಪ್ರಕ್ರಿಯೆಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವದಲ್ಲದೆ, ಮುಂದಿನ ಪೀಳಿಗೆಗೆ ಉತ್ತಮ ನಗರವನ್ನು ರೂಪಿಸಲು ಸಹಾಯವಾಗುತ್ತದೆ.

ಮುಂಬರುವ ರಾಜ್ಯ ವಿಧಾನಸಭ ಚುನಾವಣೆಯು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ತೀವ್ರವಾಗಿ ವೀಕ್ಷಿಸಲ್ಪಡುತ್ತದೆ. ಜನರ ಆಕಾಂಕ್ಷೆಗಳಿಗೆ ಧನಾತ್ಮಕವಾಗಿ ಪ್ರತಿಕ್ರಿಯಿಸುವ ರಾಜಕೀಯ ವ್ಯವಸ್ಥೆಗಳು ಕೇವಲ ನಗರದ ಸುಧಾರಣೆಗಾಗಿ ಸ್ಪರ್ಧಾತ್ಮಕ ಆಡಳಿತವನ್ನು ಮಾತ್ರ ಸೃಷ್ಟಿವುದಿಲ್ಲ. ಆದರೆ, ಪ್ರಾಂತೀಯ ವಿಷಯಗಳ ಮೇಲೆ ಬೆಂಗಳೂರಿನ ಪ್ರಾಮುಖ್ಯತೆಯನ್ನು ಬಲಪಡಿಸುತ್ತದೆ. ನಮ್ಮ ಬೆಂಗಳೂರು, ಒಟ್ಟಾಗಿ ಮತ್ತು ನಿರಂತರವಾಗಿ ಬೆಳೆಯುತ್ತಿದ್ದರೆ ನಮಗೆ ಮಾತ್ರ ಹೆಮ್ಮೆಯಲ್ಲ, ಮುಂದಿನ ಪೀಳಿಗೆಯೂ ಹೆಮ್ಮೆ ಪಡುತ್ತದೆ.

ವಂದನೆಗಳು

ರೇವತಿಅಶೋಕ್

ಗೌರವಾನ್ವಿತ ವ್ಯವಸ್ಥಾಪಕ ಟ್ರಸ್ಟಿ ಮತ್ತು

ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಬಿ.ಪ್ಯಾಕ್

1.ಆಡಳಿತ

ಭಾರತ ಸಂವಿಧಾನದ 74 ನೇ ತಿದ್ದುಪಡಿ ಸ್ಥಳೀಯ ಆಡಳಿತದಲ್ಲಿ ಪ್ರಮುಖ ರಚನಾತ್ಮಕಬದಲಾವಣೆಗಳನ್ನು ಶಿಫಾರಸು ಮಾಡಿದ್ದು, ಪುರಸಭೆಗಳನ್ನು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಹೊಂದಿದ ಘಟಕಗಳಾಗಿ ಕಾರ್ಯಗತಗೊಳಿಸಲು ಮತ್ತು ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಕೆಳಹಂತದ ಜನರು ಹೆಚ್ಚಿನ ರೀತಿಯಲ್ಲಿ ಭಾಗವಹಿಸುವಂತಹ ಅವಕಾಶ ಮಾಡಿಕೊಟ್ಟಿದೆ.ಈ ಬದ್ಧತೆಯನ್ನು ರಾಜ್ಯದಪ್ರಣಾಳಿಕೆಯಲ್ಲಿ ವಿವರಿಸುವ ಅವಶ್ಯಕತೆಯಿದೆ ಮತ್ತು ಉತ್ತೇಜನಕಾರಿಹಾಗೂ ಪರಿಣಾಮಕಾರಿಯಾಗಿಜಾರಿಗೊಳಿಬೇಕಾಗಿದೆ.

1.1 ಆಡಳಿತ ವಿಧಾನ

ಅ) ಬೆಂಗಳೂರು ನಗರಕ್ಕೆ ಸಂಬಂಧಿಸಿದ ಎಲ್ಲ ಸಂಸ್ಥೆಗಳೂ ನಗರ ಪ್ರಾಧಿಕಾರಕ್ಕೆ ಉತ್ತರದಾಯತ್ವವನ್ನು ಹೊಂದುವಂತೆ ಒಂದು ವಿಶೇಷ ಶಾಸನವನ್ನು ರೂಪಿಸುವುದು.

ಆ) ಸ್ಥಳೀಯ ಪ್ರದೇಶ ಯೋಜನೆಗಳ ಮೂಲಕ ಕೆಳ ಹಂತದಲ್ಲಿನ ಪಾಲ್ಗೊಳ್ಳುವಿಕೆ ಯೋಜನೆಗಳನ್ನಾಧರಿಸಿ, ಗ್ರೇಟರ್ ಬೆಂಗಳೂರು ವಲಯಕ್ಕಾಗಿ ಸಾಮಾನ್ಯ ಯೋಜನಾ ಪ್ರಾಧಿಕಾರ ರಚಿಸುವುದು.

ಇ) ವಾರ್ಡ್ ಮಟ್ಟದಲ್ಲಿ ನಾಗರಿಕ ಸಮಸ್ಯೆಗಳನ್ನು ಪರಿಹರಿಸಲು ನಿರ್ಧಿಷ್ಟ ವ್ಯಕ್ತಿ/ ಅಂತರ ಸಂಪರ್ಕದಾರರ ಮೂಲಕ ಪರ್ಯಾಯ ಇಲಾಖೆ/ ಒಗ್ಗೂಡಿಸಲ್ಪಟ್ಟ ಏಜೆನ್ಸಿ ರಚನೆ.

1. 2.ಹೊಣೆಗಾರಿಕೆ ನಗರ ಸರ್ಕಾರ ಮತ್ತು ನಾಗರಿಕ ಸಂಸ್ಥೆಗಳು

ಅ) ನೇರ ಚುನಾವಣೆ ಮೂಲಕ ಮೇಯರ್ ಆಯ್ಕೆಗೊಳ್ಳಬೇಕು. ನಗರವನ್ನು ದೃಷ್ಟಿಯಲ್ಲಿರಿಸಿಕೊಂಡು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಾಗೂ ಅವುಗಳನ್ನು ಅನುಷ್ಠಾನಕ್ಕೆ ತರುವ ಸಲುವಾಗಿ ಮೇಯರ್ ಅವಧಿಯನ್ನು ಐದು ವರ್ಷಗಳಿಗೆ ನಿಗದಿ ಪಡಿಸುವುದು.

ಆ) ಸೂಕ್ತ ಕಾನೂನು/ಆಡಳಿತದ ಮೂಲಕ ನಗರ ಸರ್ಕಾರಕ್ಕಾಗಿ ರಾಜಕೀಯ ಶಕ್ತಿಯನ್ನೊಳಗೊಂಡ ಸಂಸ್ಥೆ/ಸೇವಾ ಸಂಸ್ಥೆಗಳ ಹೊಣೆಗಾರಿಕೆಯನ್ನು ಖಚಿತಪಡಿಸುವುದು

ಇ) ಎಲ್ಲಾ ಯೋಜನೆಗಳ ಖರ್ಚು ವೆಚ್ಚಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸುವವುದು

ಈ) ನಗರದಲ್ಲಿ ಕಾರ್ಯರೂಪಕ್ಕೆ ತರಲಾಗುವ ಎಲ್ಲಾ ಕಾಮಗಾರಿಗಳ ಟೆಂಡರ್ಗಳ ಬಗ್ಗೆ ಸಾರ್ವಜನಿಕ ಮಾಹಿತಿ ನೀಡುವುದು.

ಉ) ವಾರ್ಡ್ ಮತ್ತು ಇಲಾಖಾ ಮಟ್ಟದ ಎಲ್ಲಾ ಪ್ರಮುಖ ಯೋಜನೆಗಳ ಬಗೆಗೆ ತೆಗೆದುಕೊಳ್ಳುವ ನಿರ್ಧಾರಗಳನ್ನು (ಕಡತಗಳಲ್ಲಿನ ಟಿಪ್ಪಣಿ ಸೇರಿದಂತೆ) ಸ್ವಯಂ ಬಹಿರಂಗಪಡಿ ಸುವುದು.

1.3.ಸಂಸ್ಥೆಗಳ ಬಲವರ್ಧನೆ ಮತ್ತು ನಾಗರಿಕರ ಪಾಲ್ಗೊಳ್ಳುವಿಕೆ

ಅ) ನಗರ ಸಂಸ್ಥೆಗಳ ಸೇವೆಗಳನ್ನು ತಾಂತ್ರಿಕವಾಗಿ ಉತ್ತಮ ಪಡಿಸುವ ಸಲುವಾಗಿ ನಾಗರಿಕ ಸಂಸ್ಥೆಗಳಿಗೆ ತಾಂತ್ರಿಕ ಸದಸ್ಯರು/ಸಲಹಾ ಮಂಡಲಿಗಳನ್ನು ನೇಮಕ ಮಾಡುವುದು.

ಆ) ನಾಗರಿಕರ ಪಾಲ್ಗೊಳ್ಳುವಿಕೆ, ಸಾರ್ವಜನಿಕರ ಮಾಹಿತಿ, ಪಾರದರ್ಶಕತೆ ಹಾಗೂ ಹೊಣೆಗಾರಿಕೆಯನ್ನು ಯನ್ನು ಹೆಚ್ಚಿಸುವ ಸಲುವಾಗಿ ನಗರ ಸಂಸ್ಥೆಗಳ ಚುಕ್ಕಾಣಿ ಹಿಡಿದ ಮುಖ್ಯಸ್ಥರು ಪ್ರತಿ 6 ತಿಂಗಳಿಗೊಮ್ಮೆ ಪ್ರಗತಿ ವರದಿ ಹಾಗೂ ಕ್ರಿಯಾ ಯೋಜನೆಗಳನ್ನು ನೀಡುವುದು.

ಇ) ವಾರ್ಡ್ ಮಟ್ಟದಲ್ಲಿ ನಾಗರಿಕರ ಸಕ್ರಿಯ ಪಾಲ್ಗೊಳ್ಳುವಿಕೆಗಾಗಿ ಹಾಗೂ ವಾರ್ಡ್ ಸದಸ್ಯರ ಆಯ್ಕೆಯನ್ನು ಪಾರದರ್ಶಕ ಹಾಗೂ ಹೊಣೆಗಾರಿಕೆಗೊಳಪಡಿಸಲು ವಾರ್ಡ್ ಸದಸ್ಯರ ಆಯ್ಕೆಗಾಗಿ ಮಾನದಂಡವನ್ನು ಅರ್ಥಪೂರ್ಣಗೊಳಿಸುವುದು.

ಈ) ಬೆಂಗಳೂರು ನಗರವು ಅನೇಕ ಪರಿಣತ ಹಿರಿಯರಿಂದ ಕೂಡಿದೆ. ನಗರ ಆಡಳಿತದಲ್ಲಿ ಅಂತಹ ಪ್ರತಿಭೆಗಳು ಪಾಲ್ಗೊಳ್ಳುವಂತೆ ಉತ್ತೇಜಿಸುವುದು. ಬೆಂಗಳೂರು ನಗರ ಮ್ಯಾನೇಜ್‌ಮೆಂಟ್‌ಗಾಗಿ ಪಾಶ್ರ್ವ ಮನರಂಜನೆ ಕಾರ್ಯಕ್ರಮಗಳನ್ನು ಹಾಗೂ ವಿಷಯತಜ್ಞರಿಂದ ಸಲಹೆ ಸೂಚನೆಗಳನ್ನು ಪಡೆಯುವುದು.

1.4.ಆರ್ಥಿಕ ಬಲವರ್ಧನೆ

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆದಾಯವನ್ನು ಸೃಷ್ಟಿಸಲು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ಮೂಲಕ ಸಂಪನ್ಮೂಲ ಕ್ರೋಢೀಕರಣ ಇಲಾಖೆಯನ್ನು ಸೃಜಿಸುವುದು. ಈ ಇಲಾಖೆ ಮೂಲಕ ಪಾಲಿಕೆಯ ಪ್ರತಿಯೊಂದು ವಲಯಕ್ಕೂ ಕಂದಾಯ ಸಂಗ್ರಹದ ಗುರಿಯನ್ನು ನಿಗದಿಗೊಳಿಸುವುದು.

ಆ) ಬೆಂಗಳೂರು ನಗರದಲ್ಲಿ ಸರ್ಕಾರ ಸಂಗ್ರಹಿಸುವ ವೃತ್ತಿ ತೆರಿಗೆಯ ಪಾಲನ್ನು ಪಾಲಿಕೆಗೆ ನಿಗದಿಗೊಳಿಸುವುದು.

ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಡೆಯುವ ಆಸ್ತಿ ನೋಂದಾವಣೆಗೆ ಸಂಬಂಧಿಸಿದಂತೆ ಸಂಗ್ರಹವಾಗುತ್ತಿರುವ ಸ್ಟಾಂಪ್ ಡ್ಯೂಟಿಯಲ್ಲಿ ಶೇ. 50ರಷ್ಟನ್ನು ಪಾಲಿಕೆಗೆ ನೀಡುವುದು.

ಈ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಂಗ್ರಹಿಸಲಾಗುವ ವಾಹನ ರಸ್ತೆ ತೆರಿಗೆಯಲ್ಲಿ ಶೇ. 50ರಷ್ಟನ್ನು ಪಾಲಿಕೆಗೆ ನೀಡುವುದು.

ಉ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಂಗ್ರಹಿಸಲಾಗುವ ವಾಹನ ಪಾರ್ಕಿಂಗ್ ಶುಲ್ಕದಲ್ಲಿ ಶೇ. 50ರಷ್ಟನ್ನು ಪಾಲಿಕೆಯ ಅಭಿವೃದ್ಧಿಗೆ ನೀಡುವುದು.

ಊ) ಬೆಂಗಳೂರು ಮೆಟ್ರೋಪಾಲಿಟಿನ್ ಹಾಗೂ ಆಸುಪಾಸಿನ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಜಿಸಲು ನಗರ ಆರ್ಥಿಕ ಅಭಿವೃದ್ಧಿ ಸ್ಥಾಪಿಸಲಾಗುವುದು.

2.ನಗರ ಸಾರಿಗೆ

2.1 ಆಡಳಿತ

ನಗರ ರಸ್ತೆ ಸಾರಿಗೆ ಸೌಲಭ್ಯಗಳನ್ನು ಯೋಜಿಸಲು ಮತ್ತು ಸಂಘಟಿಸಲು ಬೆಂಗಳೂರಿಗೆ ಸಾಮಾನ್ಯ ರಸ್ತೆ ಸಾರಿಗೆ ಪ್ರಾಧಿಕಾರ (ಬೆಂಗಳೂರು ಸಾರಿಗೆ-TfB) ಎಂದುಕರೆಯಬಹುದು)ರೂಪಿಸುವುದು. ನಗರ ಸಾರಿಗೆ ಸೇವೆ ಒದಗಿಸುವಜವಾಬ್ದಾರಿ ಹೊತ್ತಿರುವ ಎಲ್ಲಾ ಸಂಸ್ಥೆಗಳು / ನಿಗಮಗಳುಈ ಪ್ರಾಧಿಕಾರದಲ್ಲಿ ಪಾಲ್ಗೊಳ್ಳಬೇಕು.

• ಈಗಪ್ರಸ್ತುತ ಶೇ.50ರಷ್ಟಿರುವ ಸಾರಿಗೆ ಪ್ರಯಾಣಿಕರ ಪ್ರಮಾಣವನ್ನು 2025ರ ಸಮಯಕ್ಕೆಶೇ. 80ಕ್ಕೆ ವರ್ಧಿಸಲು ಕ್ರಮ ಆಗಬೇಕು. ಮೇಲಿನ ಪ್ರಾಧಿಕಾರದ ಮೂಲಕ ಯೋಜನಾ ಕ್ರಮಗಳನ್ನು ರೂಪಿಸುವುದು ಹಾಗೂ ಅನುಗುಣವಾದ ಬಜೆಟ್ ಸಿದ್ಧಪಡಿಸುವುದು..

• ಯೋಜನಾ ಹಂತದ ಆಧಾರದ ಮೇಲೆ ಸೂಕ್ತವಾದ ವಿನ್ಯಾಸದಲ್ಲಿ ರೂಪಿಸಲಾಗುವ ಪ್ರತಿ ಸಾರಿಗೆ ಯೋಜನೆಗೆ ಮೂರರಿಂದ ಐದು ಸಾರ್ವಜನಿಕ ಸಮಾಲೋಚಕರನ್ನು ನೇಮಿಸುವುದು

• ಸಾರಿಗೆಸೇವೆಗಳನ್ನು ಸುಧಾರಿಸಲು ಪರಿಣತಿ ಮತ್ತು ತಾಂತ್ರಿಕ ನಿರ್ಣಯಗಳಿಗೆ ಪೂರಕವಾಗಿ / ತಾಂತ್ರಿಕ ಸದಸ್ಯರು / ಸಲಹಾ ಗುಂಪುಗಳನ್ನು ರಚಿಸುವುದು..

ರಸ್ತೆ ಗುಣಮಟ್ಟ ಮತ್ತು ಮೂಲಸೌಕರ್ಯ

• ತಜ್ಞರಿಂದ  ಸಲಹೆ ಪಡೆದು 20 ರಿಂದ 40 ಅಡಿ ಅಗಲವಿರುವ ವಸತಿಬಡಾವಣೆಗಳ ರಸ್ತೆಗಳಿಗೆ ಸಮಾನ ವಿನ್ಯಾಸದ ವಿಶೇಷಣಗಳನ್ನು ಅಭಿವೃದ್ಧಿ.

• ಅಭಿವೃದ್ಧಿ / ಸುಧಾರಣೆ ಯೋಜನೆಗಳನ್ನು  ಕೈಗೊಂಡ ಎಲ್ಲಾ ರಸ್ತೆ ಗಳ ತಪಾಸಣೆ ವರದಿಗಳನ್ನು ಪ್ರಕಟಿಸುವುದು.

2.2 ಸಾರ್ವಜನಿಕ ಸಾರಿಗೆ

• ಪಾದಚಾರಿ ಮಾರ್ಗಗಳು ಸೇರಿದಂತೆ ಮನೆಮನೆಗೂ ಪ್ರಯಾಣಿಕ ಸ್ನೇಹಿ ಸಾರ್ವಜನಿಕ ಸಾರಿಗೆಸೌಲಭ್ಯ ನೀಡುವುದು.

• ವಿಭಿನ್ನ ಪ್ರದೇಶಗಳಿಗೆ ಸಮಂಜಸವಾದ, ಎಲ್ಲರಿಗೂ ಲಭ್ಯವಾಗುವ, ಕೈಗೆಟುಕುವಮತ್ತು ಆಕರ್ಷಕವಾದ ಸಾಮೂಹಿಕ ತ್ವರಿತ ಸಾರಿಗೆಪರಿಚಯಿಸುವುದು.

• ಸಮಾಜದಎಲ್ಲವರ್ಗಗಳಿಗೂಅನ್ವಯಿಸುವಂತೆವೈಯಕ್ತಿಕ ವಾಹನಗಳ ಬಳಕೆಯನ್ನು ವಿವಿಧ ಕ್ರಮಗಳ ಮೂಲಕ ನಿಷೇಧಿಸಿ, ಅವುಗಳನ್ನು ಬಳಸುವ ವೆಚ್ಚವನ್ನು ಹೆಚ್ಚಿಸಲು ಮತ್ತು ಸಾರ್ವಜನಿಕ ಸಾರಿಗೆಯ ಆಕರ್ಷಣೆಯನ್ನು ಸುಧಾರಿಸಲು ಕ್ರಮಗಳನ್ನು ಜಾರಿಗೊಳಿಸುವುದು.

• ನೂತನವಾಗಿ ಖರೀದಿಸಿದ ಎಲ್ಲಾ ವೈಯಕ್ತಿಕ ವಾಹನಗಳಿಗೆ ಬೆಂಗಳೂರು ಸೆಸ್ ಜಾರಿಗೆ ತರುವುದು. ಈ ಹಣವನ್ನುಸಾರ್ವಜನಿಕ ಸಾರಿಗೆ, ವಾಕಿಂಗ್ಮತ್ತು ಸೈಕ್ಲಿಂಗ್ ಮುಂತಾದ ಸುಸ್ಥಿರ ಸಾರಿಗೆ ಸುಧಾರಣೆಗಾಗಿ ಬಳಸಿಕೊಳ್ಳುವುದು.

ಬಿಎಂಟಿಸಿ

- ಪ್ರಸ್ತುತ 15,000 ಬಸ್ಸುಗಳನ್ನು ಹೊಂದಿರುವಬಿಎಂಟಿಸಿ ಬಸ್ ಸಂಚಾರವನ್ನು2025 ರೊಳಗೆ 6,417 ಬಸ್ಸುಗಳಿಗೆ ವರ್ಧಿಸುವುದು.

• ಬೇಡಿಕೆ,ರಸ್ತೆ ವಿನ್ಯಾಸಗಳನ್ನು ಅವಲಂಭಿಸಿ ವೈಜ್ಞಾನಿಕವಾಗಿ ಸೂಕ್ತ ಗಾತ್ರದ ಬಸ್ಸುಗಳನ್ನು ಬಳಸುವುದು.

• ಆಂತರಿಕ ಪ್ರದೇಶಗಳಲ್ಲಿ ಫೀಡರ್ ಸೇವೆಗಳಿಗೆ ಆದ್ಯತೆ ನೀಡುವುದು.

• ವಾರ್ಷಿಕವಾಗಿ ಶೇ.20ಬಸ್ಸುಗಳನ್ನು ಎಲೆಕ್ಟ್ರಿಕ್ ವೆಹಿಕಲ್ಸ್ (EV) ಗೆ ಬದಲಿಸುವ ಮೂಲಕ 2020ರೊಳಗೆ ಸಂಪೂರ್ಣವಾಗಿ ವಿದ್ಯುತ್ ಆಧಾರಿತ ಬಸ್ಸುಗಳನ್ನು ಸಂಚಾರಕ್ಕೆ ಬಿಡುವುದು.

2.3. ಬಿ.ಎಂ.ಆರ್.ಸಿ.ಎಲ್ (ನಮ್ಮ ಮೆಟ್ರೋ)

- ಬೆಂಗಳೂರಿನಲ್ಲಿ 2028ರ ವೇಳೆಗೆ 500 ಕಿ.ಮೀ ಮೆಟ್ರೋ ಸಂಚಾರವನ್ನು ಸಾಧಿಸುವ ಗುರಿಹೊಂದುವುದು

ಉಪನಗರ ರೈಲು

• ಉಪನಗರ ರೈಲುಗಾಗಿ ವಿಶೇಷ ಉದ್ದೇಶ ವಾಹನ (ಎಸ್.ಪಿ.ವಿ)ಗಳನ್ನು ರೂಪಿಸಿ 5 ವರ್ಷಗಳಲ್ಲಿ 260 ಕಿ.ಮೀ. ವ್ಯಾಪ್ತಿಯಲ್ಲಿ ಉಪನಗರ ರೈಲು ಅಳವಡಿಸುವುದು.

ಆಟೋ ರಿಕ್ಷಾ

ಮುಂದಿನ 5 ವರ್ಷಗಳಲ್ಲಿ ಎಲ್ಲಾ ಆಟೋಗಳು ವಿದ್ಯುತ್ ವಾಹನಗಳಾಗಿ ಪರಿವರ್ತಿಸುವುದು, ಅಸ್ತಿತ್ವದಲ್ಲಿರುವ ಆಟೋಗಳ ಬದಲಿಗೆ ವಿದ್ಯುತ್ ವಾಹನವನ್ನು ಖರೀದಿಸಲುಪ್ರೋತ್ಸಾಹಕಗಳನ್ನು ನೀಡುವುದು.

• ನಗರದಲ್ಲಿ 50,000 ವಿದ್ಯುತ್ ಆಟೋಗಳಿಗೆ ಪರವಾನಗಿಗಳನ್ನು ನೀಡುವುದು.

ಕೊನೆಯ ಮೈಲಿ ಸಂಪರ್ಕ

- ಸಾರ್ವಜನಿಕ ಸಾರಿಗೆಗೆ ತೆರಳಲುನಾಗರಿಕರು 500 ಮೀಟರ್ ದೂರಕ್ಕಿಂತಲೂ ಹೆಚ್ಚು ನಡೆಯದಂತೆ ಕ್ರಮ ಕೈಗೊಳ್ಳುವುದು.
- ಸಾರ್ವಜನಿಕ ಸಾರಿಗೆ ಕೇಂದ್ರಗಳಿಂದಹತ್ತಿರದಟೆಕ್ಪಾರ್ಕುಗಳು, ಮಾರುಕಟ್ಟೆಗಳು, ಮಾಲುಗಳು, ಕಚೇರಿಹಾಗೂವಿದ್ಯಾಸಂಸ್ಥೆಗಳಿಗೆಸಂಪರ್ಕಕಲ್ಪಿಸುವಂತೆಸೈಕಲ್ಲುಗಳು, ಇ-ಬೈಕುಗಳು, ಶೇರ್ ಮಾಡಬಹುದಾದ ಆಟೋಗಳುಲಭ್ಯವಾಗುವಂತೆಕೊನೆಮೈಲಿಸಂಪರ್ಕಗಳಿಗೆಅವಕಾಶಕಲ್ಪಿಸುವುದು.

2.4 ಪಾದಚಾರಿ ಸ್ನೇಹಿ

• ಬೆಂಗಳೂರಿನಾದ್ಯಂತ ಪಾದಚಾರಿ ಮಾರ್ಗಗಳು ಮತ್ತು ಸುರಕ್ಷಿತ ಪಾದಚಾರಿ ರಸ್ತೆ ದಾಟುವ ಸೌಲಭ್ಯಗಳನ್ನು ವಿಸ್ತರಿಸುವುದು.

• ಮೀಸಲಾದ ಬೀದಿ ಮಾರಾಟ ವಲಯಗಳೊಂದಿಗೆ ಅಂತರ್ಗತ ರಸ್ತೆ ನಿರ್ಮಾಣ ಯೋಜನೆ

2.5 ಇ-ಸಾರಿಗೆ, ಪಾರ್ಕಿಂಗ್

• ಪಾರ್ಕಿಂಗ್ ರಹಿತಮತ್ತುಪಾವತಿಮಾಡಿ ಪಾರ್ಕಿಂಗ್ಮಾಡಬಹುದಾದರಸ್ತೆಗಳನ್ನು ಗುರುತಿಸಿ ಕಟ್ಟುನಿಟ್ಟಾದ ಪಾರ್ಕಿಂಗ್ ನಿಯಮಗಳನ್ನು ಜಾರಿಗೊಳಿಸುವುದು.

- ಮುಖ್ಯಹಾಗೂಉಪಮುಖ್ಯರಸ್ತೆಗಳಲ್ಲಿಚಲನಶೀಲತೆ / ರೇಡಿಯೋ ಟ್ಯಾಕ್ಸಿಗಳು ಮತ್ತು ಆಟೋಗಳನ್ನು ಪೂರೈಸುವವರಿಗಾಗಿ ಹಾಗೂ ಬಳಕೆದಾರರ ಪ್ರಯೋಜನಕ್ಕಾಗಿ ಮೀಸಲು ಪಾರ್ಕಿಂಗ್ ಮತ್ತು ಪಿಕಪ್ ವಲಯಗಳನ್ನು ಪರಿಚಯಿಸುವುದು.
- ಶೇ. 100ರಷ್ಟು ವಿದ್ಯುತ್ ವಾಹನಗಳ ಚಲನಶೀಲತೆಯನ್ನು ಸಾಧಿಸುವ ಉದ್ದೇಶದಿಂದ ದ್ವಿಚಕ್ರ ತ್ರಿಚಕ್ರ ವಾಹನಗಳು, ಆಟೋ ರಿಕ್ಷಾಗಳು, ಕ್ಯಾಬ್ ಸಮುಚ್ಚಯಗಳು, ಕಾರ್ಪೋರೇಟ್ ವಾಹನಗಳು ಮತ್ತು ಶಾಲಾ ವ್ಯಾನ್ / ಬಸ್ಸುಗಳನ್ನು ಪ್ರೋತ್ಸಾಹಿಸುವುದು.
- ಬೆಂಗಳೂರು ವಿದ್ಯುತ್ ಚಲನಶೀಲತೆಯನ್ನು ಪ್ರೋತ್ಸಾಹಿಸಲು ಮೂಲಸೌಕರ್ಯವಾದ ಚಾರ್ಜಿಂಗ್ ಸೌಲಭ್ಯ ನೀಡುವ ಅಗತ್ಯವಿದೆ. ಸಾರ್ವಜನಿಕ ಕಟ್ಟಡಗಳು, ಪಾರ್ಕಿಂಗ್ ಸ್ಥಳಗಳು, ಮಾಲುಗಳು, ಟೆಕ್ ಕ್ಯಾಂಪಸ್, ಎತ್ತರದ ಕಟ್ಟಡಗಳು ಮುಂತಾದ ಸ್ಥಳಗಳಲ್ಲಿ ಚಾರ್ಜಿಂಗ್ ಸೌಲಭ್ಯವನ್ನು ಕಡ್ಡಾಯಗೊಳಿಸುವುದು.

3. ನೀರು, ತ್ಯಾಜ್ಯ ನೀರು ಮತ್ತು ನೈರ್ಮಲ್ಯ

3.1 ಸಾಂಸ್ಥಿಕ ಸುಧಾರಣೆಗಳು ಮತ್ತು ಆಡಳಿತ

- ಬೆಂಗಳೂರುಮೆಟ್ರೋಪಾಲಿಟನ್ವ್ಯಾಪ್ತಿಯಲ್ಲಿನೀರು ಸರಬರಾಜು, ಅಂತರ್ಜಲ ಮರುಪೂರಣ ಮತ್ತು ಅಂತರ್ಜಲ ಬಳಕೆಗೆ ಸಂಬಂಧಿಸಿದ ಜವಾಬ್ದಾರಿಯುತ ವಿವಿಧ ಏಜೆನ್ಸಿಗಳ ನಡುವೆ ಸಮನ್ವಯವನ್ನು ತರುವ ಸಲುವಾಗಿ ಸಂಬಂಧಿಸಿದ ಒಂದೇ ಏಜೆನ್ಸಿಯನ್ನು ರೂಪಿಸುವುದು. ಈ ಸಂಸ್ಥೆಯುನೀರಿನ ಬಳಕೆಯಲ್ಲಿ ದಕ್ಷತೆ ಮತ್ತು ಗುಣಮಟ್ಟದ ಮೇಲ್ವಿಚಾರಣೆ ಮಾಡುವುದು.
- ಈ ಪ್ರಾಧಿಕಾರವು ತಜ್ಞರು, ಚುನಾಯಿತ ಪ್ರತಿನಿಧಿಗಳು ಮತ್ತು ನಾಗರಿಕ ಪ್ರಾತಿನಿಧ್ಯದ ಸದಸ್ಯರನ್ನು ಒಳಗೊಂಡಿರುವುದು.
- ನೀರಿನಮೂಲ, ವಿತರಣೆ, ಸಂಸ್ಕರಣೆಮತ್ತುಹೊರಹಾಕುವಿಕೆ ಈ ಮೂರೂಸೇವೆಗಳಿಗೆಸಂಬಂಧಿಸಿದಂತೆಸ್ವತಂತ್ರ ಮತ್ತು ಅಧಿಕೃತ ಘಟಕಗಳು ಕಾರ್ಯ ನಿರ್ವಹಿಸುವುದು.

- ದೀರ್ಘಕಾಲೀನ ಮತ್ತು ಅಲ್ಪಾವಧಿಯ ಅಗತ್ಯತೆಗಳೆರಡನ್ನೂ ಯೋಜಿಸಲು ಮತ್ತು ಅದಕ್ಕೆ ಅನುಗುಣವಾಗಿ ಈ ಘಟಕಗಳುಕಾರ್ಯನಿರ್ವಹಿಸುವವು.
- ಮೇಲಿನ ಪ್ರಾಧಿಕಾರದ ಕಾರ್ಯಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ನಿಯಂತ್ರಣ ಪ್ರಾಧಿಕಾರವನ್ನು ಸ್ಥಾಪಿಸಲಾಗುವುದು. ದೀರ್ಘಾವಧಿಯ ಯೋಜನಾ ಅವಶ್ಯಕತೆಗಳನ್ನು ಪರಿಶೀಲಿಸುವುದು, ಬೆಲೆ ನಿಗದಿ ಇತ್ಯಾದಿಗಳನ್ನು ನಿಯಂತ್ರಣಪ್ರಾಧಿಕಾರಗಮನಿಸುವುದು.
- ಬೆಂಗಳೂರು ನಗರವನ್ನು ನೀರಿನ ಸೂಕ್ಷ್ಮ ನಗರ ಎಂದು ಘೋಷಿಸಿ, ನೀರನ್ನುವಿವೇಚನೆಯಿಂದಬಳಸಲುನಾಗರಿಕರನ್ನು ಸಿದ್ಧಗೊಳಿಸುವುದು.

3.2 ನೀರು ಸರಬರಾಜು

- ಎಲ್ಲಾ ನಾಗರಿಕರಿಗೆ ಸಮವಾಗಿನೀರನ್ನು ವಿತರಿಸಲಾಗುವುದು. ಪ್ರತಿ ನಾಗರಿಕರಿಗೆ ೯೦ LPCD (ಪ್ರತಿನಿತ್ಯ ಪ್ರತಿಯೊಬ್ಬರಿಗೆ ಲೀಟರ್ ಪ್ರಮಾಣದಲ್ಲಿ) ನೀರನ್ನು ಕೈಗೆಟುಕುವ ದರದಲ್ಲಿ ಒದಗಿಸುವುದು. ಬಿಪಿಎಲ್ ಕಾರ್ಡುದಾರರಿಗೆ ಮಾತ್ರ ಉಚಿತವಾಗಿ ನೀರನ್ನು ನೀಡುವುದು. ಉಳಿದಂತೆ ಎಲ್ಲರಿಗೂ ಬೆಲೆಗಳು ಒಂದೇ ರೀತಿ ಇರುವುದು.
- ಮಳೆನೀರು, ಕೆರೆಗಳು ಮತ್ತು ಮರುಬಳಕೆಯ ನೀರಿನಿಂದ ಸ್ಥಳೀಯ ನೀರಿನ ಮೂಲಗಳನ್ನು ಅಭಿವೃದ್ಧಿಪಡಿಸುವುದು.
- ಮೂಲದಿಂದ ಗ್ರಾಹಕರಿಗೆ ಹರಿಸು ಬರುವ ನೀರಿನ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡಲು ನೀರಿನ ಸುರಕ್ಷತೆ ಯೋಜನೆಗೆ ಆದ್ಯತೆ ನೀಡುವುದು.
- ಪರ್ಯಾಯ ಮೂಲವನ್ನು ಒಳಗೊಂಡಂತೆ ಮಳೆನೀರುಚರಂಡಿನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡುವುದು.
- ಬೆಂಗಳೂರುಅಭಿವೃದ್ಧಿಪ್ರಾಧಿಕಾರ, ಮಹಾನಗರಪಾಲಿಕೆಯಉದ್ಯಾನವನಗಳು ಮತ್ತು ಎಲ್ಲಾ ಸಾಂಸ್ಥಿಕ ಹಸಿರು ಸ್ಥಳಗಳಿಗೆ ಸಂಸ್ಕರಿಸಿದಮರುಬಳಕೆಯ ನೀರನ್ನು ಮಾತ್ರ ಬಳಸುವುದನ್ನು ಕಡ್ಡಾಯಮಾಡುವುದು.

ನೀರು ವಿತರಣೆ ನಷ್ಟಗಳು

- ನೀರುಸಾಗಣೆಮತ್ತುವಿತರಣೆಯಲ್ಲಾಗುತ್ತಿರುವಶೇ 45ರಷ್ಟು ನಷ್ಟವನ್ನು2025 ರ ಹೊತ್ತಿಗೆ ಶೇ. 25ಕ್ಕೆ ಇಳಿಸುವುದು.

3.3. ಜಲ ಸಂರಕ್ಷಣೆ

- ನೀರು ಸಂರಕ್ಷಣೆಯನ್ನು ಪ್ರೋತ್ಸಾಹಿಸುವ ಸಲುವಾಗಿ ನೀರಿನ ಸಮರ್ಥ ನಲ್ಲಿಗಳು ಮತ್ತು ತೊಟ್ಟಿಗಳನ್ನು ಸಹಾಯಧನದ ದರದಲ್ಲಿ ನಾಗರಿಕರಿಗೆ ಒದಗಿಸುವುದು.
- ನೀರನ್ನು ಮಾರಾಟ ಮಾಡಲು ನಿಯಂತ್ರಿಸುವ ದಕ್ಷನಿಬಂಧನೆಗಳನಿಯಮಗಳನ್ನು ತರುವುದು.
- ಬೆಂಗಳೂರು ನಗರದಲ್ಲಿನ ಸರ್ಕಾರಿ ಕಚೇರಿಗಳು, ವಾಣಿಜ್ಯ ಸಂಸ್ಥೆಗಳು, ವಸತಿ ಕಟ್ಟಡಗಳಲ್ಲಿ ಶೇ.100ರಷ್ಟು ಮಳೆನೀರು ಕೊಯ್ಲು ಅಳವಡಿಸಿಕೊಳ್ಳುವ ನಿಯಮವನ್ನು ಜಾರಿಗೊಳಿಸುವುದು.

- ಅಂತರ್ಜಲನೀರಿನಮಟ್ಟವನ್ನುಅಧ್ಯಯನಮಾಡಿಪ್ರಕಟಿಸುವುದು.

3.4 ತ್ಯಾಜ್ಯ ನೀರು ಸಂಸ್ಕರಣೆ (ಒಳಚರಂಡಿ)

- ಚರಂಡಿ ನೀರನ್ನು ಸಂಪನ್ಮೂಲ ಎಂದು ಪರಿಗಣಿಸುವುದು.
- ಸಂಸ್ಕರಿಸಿದ ನೀರಿನ ಬಳಕೆಬಗ್ಗೆಅರಿವುಮೂಡಿಸಲುನಾಗರಿಕರಿಗೆ ಕಾರ್ಯಕ್ರಮಗಳನ್ನುಏರ್ಪಾಡುಮಾಡುವುದು.
- ಕೊಳಾಯಿಸರಬರಾಜು ನೀರು ಮತ್ತು ಸಂಸ್ಕರಿಸಿದ ತ್ಯಾಜ್ಯ ನೀರಿಗೆ ಪ್ರತ್ಯೇಕ ಬೆಲೆಗಳನ್ನು ನಿಗದಿ ಮಾಡುವುದು.
- ನಿಖರ ಮೀಟರಿಂಗ್ ಮೂಲಕ ಸಂಸ್ಕರಿತ ತ್ಯಾಜ್ಯ ನೀರು ಬಳಕೆಯನ್ನು ಉತ್ತೇಜಿಸುವುದು.
- ಉದ್ಯಾನವನಗಳು ಮತ್ತು ಆಟದ ಮೈದಾನಗಳಲ್ಲಿ ಭೂಗತ ತ್ಯಾಜ್ಯ ನೀರು ಸಂಸ್ಕರಣ ಘಟಕಗಳನ್ನು ಸ್ಥಾಪಿಸುವುದು.
- ಖಾಸಗಿ ಏಜೆನ್ಸಿ ಮೂಲಕ ಒಳಚರಂಡಿ ನೀರನ್ನು ಬಳಸಿಕೊಂಡು ವಾಹನಗಳನ್ನುಸ್ವಚ್ಛಗೊಳಿಸುವ ಕಿಯೋಸ್ಕಗಳನ್ನುಆರಂಭಿಸುವುದು.
- ಬಿಡಿಎ, ಬಿಬಿಎಂಪಿ, ಕೆ.ಹೆಚ್.ಬಿಹಾಗೂಖಾಸಗಿಯವರುನೂತನವಾಗಿನಿರ್ಮಿಸುವಬಹು ಅಂತಸ್ತಿನ ಸಂಕೀರ್ಣಗಳಿಗೆ ದ್ವಿಕೊಳವೆ ನೀರಿನಮಾರ್ಗಗಳನ್ನು ಅಳವಡಿಸುವುದನ್ನು ಕಡ್ಡಾಯ ಮಾಡುವುದು.
- ಕೈಗಾರಿಕೆ, ವಾಣಿಜ್ಯಸೇರಿದಂತೆಕಚ್ಚಾನೀರುಬೇಡಿಕೆಯಿರುವಮೂಲಗಳನ್ನು ಗುರುತಿಸಿ ಅಲ್ಲಿ ತ್ಯಾಜ್ಯ ನೀರುಸಮಸ್ಕರಣ ಘಟಕಗಳನ್ನು ಬೇಡಿಕೆಯ ಆಧಾರದ ಮೇಲೆ ಸ್ಥಾಪಿಸಸುವ ಮೂಲಕ ಶುದ್ಧನೀರಿನ ಮೇಲಿನ ಹೊರೆಯನ್ನು ಕಡಿಮೆಮಾಡುವುದು. ಸಂಸ್ಕರಿಸಿದ ತ್ಯಾಜ್ಯ ನೀರಿನಿಂದ ಹೊರಹಾಕಲ್ಪಡದ ಇಂಧನ, ನೈಟ್ರೇಟ್, ರಂಜಕಮತ್ತು ಜೈವಿಕ ಘನವಸ್ತುಗಳನ್ನು ಬೇರ್ಪಡಿಸುವುದು.

4. ಮಹಿಳಾ ಮತ್ತು ಮಕ್ಕಳ ಸುರಕ್ಷತೆ ಮತ್ತು ಅಭಿವೃದ್ಧಿ

4.1. ಆಡಳಿತ

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗಾಗಿಯೇ ಮೀಸಲಾದ ಸಚಿವರನ್ನು ನೇಮಿಸುವುದು ಮತ್ತು ಈ ಖಾತೆಯನ್ನು ಹೊಂದಿದ ಸಚಿವರಿಗೆ ಬೇರಾವುದೆ ಖಾತೆ ವಹಿಸದಿರುವುದು.
- ಏಜೆನ್ಸಿಗಳ ನಡುವಿನ ಸಮನ್ವಯಕ್ಕೆ ತಕ್ಕನಂತೆ ನಿರ್ಧಿಷ್ಟ ಪಡಿಸಿದ ಆವರ್ತಕ ಸಭೆಗಳನ್ನು ಏರ್ಪಡಿಸುವುದು.
- ವಿವಿಧ ವಲಯಗಳಲ್ಲಿನ ಮಹಿಳೆಯರ ಪ್ರಗತಿಯ ಬಗ್ಗೆ ವಾರ್ಷಿಕ ವರದಿಸಿದ್ಧಮಾಡುವುದು.

  ಸಾರ್ವಜನಿಕ ಸ್ಥಳಗಳು

  ವಿವರ:

- ನಗರದ ಸುರಕ್ಷತೆ ಪ್ರಮಾಣವನ್ನು ಹೆಚ್ಚಿಸಲು ವ್ಯಾಖ್ಯಾನಿಸಲಾದ ಸುರಕ್ಷತಾ ಮಾನದಂಡಗಳನ್ನು (ಕಾಲುದಾರಿ, ಬೀದಿ ದೀಪಗಳು, ಲಿಂಗ ಮಿಶ್ರಣ, ಭದ್ರತೆ ಇತ್ಯಾದಿ) ಮತ್ತು ಅವಶ್ಯಕ ನೆರವನ್ನು ಆಧರಿಸಿ ಸುರಕ್ಷತೆಯನ್ನು

ಹೆಚ್ಚಿಸುವುದು. ಸುರಕ್ಷತಾ ಮಾನದಂಡಗಳು ಮತ್ತು ಅಪರಾಧ ವಿವರಗಳನ್ನು (ಅತ್ಯಾಚಾರ, ಸರಗಳ್ಳತನ ಇತ್ಯಾದಿ.) ಗಮನದಲ್ಲಿರಿಸಿಕೊಂಡು, ಹೆಚ್ಚಿನ ನೆರವು ವಿಸ್ತರಿಸಲು ಯೋಜನೆಗಳನ್ನು ರೂಪಿಸುವುದು.

- ಸಾರ್ವಜನಿಕ ಸ್ಥಳಗಳಲ್ಲಿ ಸುರಕ್ಷತೆಯ ಗ್ರಹಿಕೆ ಕುರಿತು ಆವರ್ತಕ ಸಮೀಕ್ಷೆ ನಡೆಸಲು ಅಗತ್ಯವಿರುವ ಕ್ರಮಗಳನ್ನು ಅರ್ಥ ಮಾಡಿಕೊಳ್ಳಲು ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸಾರ್ವಜನಿಕ ಸ್ಥಳಗಳನ್ನು ಸುರಕ್ಷಿತವಾಗಿಸುವುದು.
- ಸಾರ್ವಜನಿಕ ಸ್ಥಳಗಳಲ್ಲಿ ಸುರಕ್ಷತೆಗೆ ಸಂಬಂಧಿಸಿದ ಎಲ್ಲಾ ಸಮೀಕ್ಷೆ ವರದಿಗಳು ಮತ್ತು ಇತರ ವಿವರಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡುವುದು. ಇದರಿಂದಾಗಿ ಸಾರ್ವಜನಿಕ ಸ್ಥಳಗಳಲ್ಲಿ ದೀರ್ಘಕಾಲ ಸುರಕ್ಷತಾ ಕಾಳಜಿಯ ಪರಿಹಾರಗಳನ್ನು ಗುರುತಿಸುವಲ್ಲಿ ನಾಗರಿಕರನ್ನು ಒಳಗೊಳಿಸಲು ಸಾಧ್ಯವಾಗುತ್ತದೆ.
- ಶಾಲೆಗಳ ಸುತ್ತಲಿನ ಸ್ಥಳಗಳನ್ನು ಮಕ್ಕಳಿಗೆ ನಡೆದಾಡಲು ಸುರಕ್ಷಿತವಾಗಿಡುವುದು. ಅಗತ್ಯವಾದ ಪಾದಚಾರಿಸ್ನೇಹಿ ಮೂಲಸೌಕರ್ಯದೊಂದಿಗೆ, ಶಾಲೆಗಳಿಗೆ ಹೋಗುವ ಮಾರ್ಗಗಳನ್ನು ಗುರುತಿಸುವುದು. ಮಕ್ಕಳು ಸುರ ಕ್ಷಿತವಾಗಿ ಹಾದಿ ದಾಟಲು ಸಹಾಯ ಮಾಡುವ ಸಲುವಾಗಿ ಡ ಟ್ರಾಫಿಕ್ ವಾರ್ಡನ್ನುಗಳು / ಸ್ವಯಂಸೇವಕರನ್ನು ಗುರುತಿಸುವುದು.

4.2.ತಡೆಗಟ್ಟುವಿಕೆ ಮತ್ತು ಪರಿಹಾರ

- ಸ್ವಯಂಚಾಲಿತ ಬೀದಿ ದೀಪಗಳಿಂದ ಸಾರ್ವಜನಿಕ ಸ್ಥಳಗ ಳಿಂದ ಹೆಚ್ಚು ಪ್ರಕಾಶಮಾನವಾಗುತ್ತದೆ. ನಿಷ್ಕ್ರಿಯ ಬೀದಿ ದೀಪಗಳನ್ನು ಸರಿಪಡಿಸಲು ಪ್ರಕ್ರಿಯೆ ಮತ್ತು ತಂತ್ರಜ್ಞಾನವನ್ನು ಅಳವಡಿಸುವುದು.
- ಸಾಕಷ್ಟು ಸಿ.ಸಿ.ಟಿ.ವಿ ಸ್ಥಾಪಿಸಲು ಮತ್ತು ಸಾರ್ವಜನಿಕ ಮತ್ತು ಖಾಸಗಿ ಸಿ.ಸಿ.ಟಿ.ವಿಗಳ ಸಂಯೋಜನೆಯಿಂದ ನಗರಕ್ಕೆ ಉತ್ತಮ ಸುರಕ್ಷತೆಯ ಜಾಲವನ್ನು ಸೃಷ್ಟಿಸಬಹುದು. ಪ್ರಸ್ತಾಪಿಸಿದ ನಿರ್ದಿಷ್ಟ ಸಿ.ಸಿ.ಟಿ.ವಿಗಳ ಸಹಾಯದಿಂದ ತಡೆಯಲಾದ ಅಪರಾಧಗಳ ಸಂಖ್ಯೆಯನ್ನು ಪರಿಶೀಲಿಸುವುದು ಹಾಗೂ ಅದರ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಲಭ್ಯವಾಗುವಂತೆ ಮಾಡುವುದು.

4.3 ಭದ್ರತೆ

- ಕಾಲೇಜುಗಳು ಮತ್ತು ಉದ್ಯಾನವನಗಳ ಸುತ್ತಲೂ ಪೋಲಿಸ್ ಗಸ್ತು ತಿರುಗುವಿಕೆ (ಜೀಪುಗಳು ಹಾಗೂ ದ್ವಿಚಕ್ರ ವಾಹನಗಳಲ್ಲಿ) ಹೆಚ್ಚಿಸುವುದು.
- ತಮ್ಮ ಕಣ್ಣುಗಳನ್ನು ಜಾಗೃತಗೊಳಿಸುವಂತೆ ಖಾಸಗಿ ಭದ್ರತಾ ಸಿಬ್ಬಂದಿಯನ್ನು ಸಜ್ಜುಗೊಳಿಸಿ, ಅವರಿಂದ ಪೊಲೀಸರು ಮಾಹಿತಿ ಪಡೆಯಲು ಅನುಕೂಲ ಕಲ್ಪಿಸಿಕೊಳ್ಳುವಂತೆ ಮಾಡುವುದು.

4.4 ಮೂಲಸೌಕರ್ಯ

- ಬೆಂಗಳೂರಿನಿಡಿ ಪಾದಚಾರಿಸ್ನೇಹಿ ಮತ್ತು ಸುರಕ್ಷಿತ ಕಾಲುದಾರಿಗಳನ್ನು ನಿರ್ಮಿಸುವುದು.

ಬೆಂಗಳೂರಿನಾದ್ಯಂತ ಗುಣಮಟ್ಟದ ಬಸ್ ತಂಗುದಾಣಗಳ ವಿನ್ಯಾಸ. ಪ್ರಯಾಣಿಕರಿಗೆ ಸಹಾಯ ಮಾಡಲು ಸಿ.ಸಿ.ಟಿ.ವಿ ಕ್ಯಾಮರಾಗಳು, ಸುರಕ್ಷತೆ ಎಚ್ಚರಿಕೆ ಗಂಟೆಗಳು ಮತ್ತು ಪ್ರಯಾಣಿಕರ ಮಾಹಿತಿ ವ್ಯವಸ್ಥೆ ರೂಪಿಸುವುದು.

- ಯುವ ತಾಯಂದಿರು ಮತ್ತು ಹಿರಿಯ ಮಹಿಳಾ ನಾಗರಿಕರಿಗೆ ನೆರವಾಗಲು ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರಿಗೆ ಮಾತ್ರ / ಮಹಿಳಾಸ್ನೇಹಿ ಸಾರ್ವಜನಿಕ ಶೌಚಾಲಯಗಳು ಮತ್ತು ವಿಶ್ರಾಂತಿ ಕೋಣೆಗಳನ್ನು ನಿರ್ಮಿಸುವುದು.

1. ಸಾರ್ವಜನಿಕ ಸಾರಿಗೆ

- ಸಾರ್ವಜನಿಕ ಸಾರಿಗೆಯು ಆರ್ಥಿಕ ಮತ್ತು ಸುರಕ್ಷತೆಯ ದೃಷ್ಟಿಯಿಂದ ಎಲ್ಲ ಮಹಿಳೆಯರಿಗೂ ಎಟುಕುವಂತಹುದು.
- ಬಸ್ ನಿಲ್ದಾಣಗಳು ಮತ್ತು ಮೆಟ್ರೊ ನಿಲ್ದಾಣಗಳು ಕೊನೆಯ ಮೈಲಿ ಸಂಪರ್ಕದವರೆಗೂ ಮಹಿಳೆಯರಿಗೆ ಆರ್ಥಿಕ ಮತ್ತು ಸುರಕ್ಷಿತ ಆಯ್ಕೆ.

2. ಕಾರ್ಯಸ್ಥಳ

- ಔಪಚಾರಿಕ ಮತ್ತು ಅನೌಪಚಾರಿಕ ವಲಯದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಕೆಲಸದ ಸ್ಥಳಗಳಲ್ಲಿ ಸುರಕ್ಷಿತಗೊಳಿಸುವ ಪ್ರಯತ್ನಗಳು.
- ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿನ ಕಾರ್ಯಸ್ಥಳದಲ್ಲಿ ಕಾಯ್ದೆಯಂತೆ ಲೈಂಗಿಕ ಕಿರುಕುಳದ ಅನುಸರಣೆಯನ್ನು ಪರಿಶೀಲಿಸಲು ತಂತ್ರಜ್ಞಾನದ ಬೆಂಬಲದೊಂದಿಗೆ ಯೋಜನೆ ಮತ್ತು ತಂತ್ರ ರೂಪಿಸುವುದು.
- ಬೆಂಗಳೂರು ಮತ್ತು ರಾಜ್ಯದಾದ್ಯಂತ ಸ್ಥಳೀಯ ದೂರುಗಳ ಸಮಿತಿಯ (ಎಲ್.ಸಿ.ಸಿ) ಸಂಖ್ಯೆಯನ್ನು ಹೆಚ್ಚಿಸಲು ಹಣ ಮತ್ತು ಸಂಪನ್ಮೂಲಗಳನ್ನು ಒದಗಿಸುವುದು.
- ಸಂಭಾವ್ಯ ಮತ್ತು ಅಸ್ತಿತ್ವದಲ್ಲಿರುವ ಆಂತರಿಕ ದೂರು ಸಮಿತಿಯ ಸದಸ್ಯರಿಗೆ ಸಾಮರ್ಥ್ಯ ನಿರ್ಮಾಣ ಕಾರ್ಯಾಗಾರಗಳನ್ನು ನಡೆಸುವುದು.
- ಸರ್ಕಾರದ ಸಂಘಟನೆಗಳು ಮತ್ತು ಅನೌಪಚಾರಿಕ ವಲಯದಲ್ಲಿ ಲಿಂಗ ಸಂವೇದನೆ ಕಾರ್ಯಕ್ರಮಗಳು ಮತ್ತು ಪ್ರಚಾರಗಳನ್ನು ನೀಡುವುದು.
- ಎಲ್ಲಾ ಪೋಲಿಸ್ ಸ್ಟೇಷನ್ಗಳು, ವಾರ್ಡ್ ಕಚೇರಿಗಳು ಮತ್ತು ಇತರ ಸಾರ್ವಜನಿಕ ಜಾಗಗಳಲ್ಲಿ ಕೆಲಸದ ಸ್ಥಳದಲ್ಲಿ ಕೆಲಸ ಮಾಡುವ ಮಹಿಳೆಯರ ಸುರಕ್ಷತೆ ಕುರಿತು ಜಾಗೃತಿ ಸಲಕರಣೆಗಳು ಲಭಿಸುವಂತೆ ವ್ಯವಸ್ಥೆ ಮಾಡುವುದು.

3. ಶಿಕ್ಷಣ

- ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಸಂಪನ್ಮೂಲಗಳನ್ನು ನೀಡುವುದು ಮತ್ತು ಖಾಸಗಿ ಶಾಲೆಗಳಲ್ಲಿ ಅನುಷ್ಠಾನದ ಮೇಲ್ವಿಚಾರಣೆ ಮಾಡುವುದು.

- ಲಾಭರಹಿತ ಸಂಸ್ಥೆಗಳು ಮತ್ತು ಕಾರ್ಪೊರೇಟ್ ಕಂಪನಿಗಳು/ಫೌಂಡೇಷನ್ಗಳು ಕಾರ್ಯತಂತ್ರದ ಪಾಲುದಾರಿಕೆಗಳ ಮೂಲಕ ಶಾಲೆಗಳ ಸಮಗ್ರ ಬೆಳವಣಿಗೆಗಾಗಿ ಸಹಕಾರ ನೀಡುವುದು.
- ಶಾಲೆಗಳಲ್ಲಿ ನಡೆಯುತ್ತಿರುವ ಉಪಕ್ರಮಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ಕಾರ್ಯಕ್ರಮಗಳನ್ನು ಪುನರಾವರ್ತಿಸುವುದನ್ನು ತಡೆಗಟ್ಟಲು ತಂತ್ರಜ್ಞಾನ ಅಳವಡಿಕೆ.
- ಸುರಕ್ಷತಾ ಕಾಳಜಿಗಳು ಮತ್ತು ಶಾಲೆಗಳಲ್ಲಿ ಎದುರಿಸುತ್ತಿರುವ ಇತರ ಸಮಸ್ಯೆಗಳನ್ನು ಪರಿಹರಿಸಲು ಮೀಸಲಾದ ಸಹಾಯವಾಣಿ ಸಂಖ್ಯೆಯನ್ನು ನಿಗದಿ ಮಾಡುವುದು.
- ಎಲ್ಲಾ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ವೈಯಕ್ತಿಕ ಸುರಕ್ಷತೆ, ಲೈಂಗಿಕ ಸುರಕ್ಷತೆ ಮತ್ತು ಜೀವನ ಕೌಶಲ್ಯ ಕಾರ್ಯಕ್ರಮ ನೀಡುವುದು. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವೃತ್ತಿ ಅವಕಾಶಗಳ ಕಾರ್ಯಕ್ರಮಗಳನ್ನು ಆರಂಬಿಸುವುದು.
- ಮಕ್ಕಳಿಗಾಗಿ ಮನಸ್ಸಾಮಾಜಿಕ ಮತ್ತು ನಡವಳಿಕೆಯನ್ನು ನಿಭಾಯಿಸಲು ಸಹಕಾರಿಯಾಗಿ ಸ್ಥಳೀಯ ಸಮುದಾಯದ ಸಲಹೆಗಾರರು ಅಥವಾ ಬೆಂಬಲಿಗರ ನೆರವನ್ನು ಪಡೆಯುವುದು.
- ಸರ್ಕಾರಿ ಶಾಲೆಗಳಲ್ಲಿ ಶಾಲಾ ಕಾರ್ಯಕ್ರಮಗಳ ನಂತರ ಸ್ಥಳೀಯ ಸಮುದಾಯದ ಬೆಂಬಲದೊಂದಿಗೆ ಇಂತಹ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
- ವಿಶೇಷ ಸಾಮರ್ಥ್ಯಗಳು / ಪ್ರತಿಭೆ / ಕೌಶಲಗಳನ್ನು ಹೊಂದಿರುವ ಮಕ್ಕಳ ತರಬೇತಿ ಮತ್ತು ಮಾರ್ಗದರ್ಶನಕ್ಕಾಗಿ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸುವುದು, ತಮ್ಮ ವೃತ್ತಿಜೀವನದ ಹಿತಾಸಕ್ತಿಗಳಿಗನುಗುಣವಾಗಿ ವಿಜ್ಞಾನ, ತಂತ್ರಜ್ಞಾನ ಅಥವಾ ಇತರ ಯಾವುದೇ ಕ್ಷೇತ್ರಗಳಲ್ಲಿ ತೊಡಗಿಕೊಳ್ಳಲು ಅವಕಾಶ ಕಲ್ಪಿಸುವುದು.
- ಹದಿಹರೆಯದ ಹೆಣ್ಣು ಮಕ್ಕಳಿಗೆ ವೈದ್ಯಕೀಯ ತುರ್ತುಸ್ಥಿತಿ ಮತ್ತು ಮುಟ್ಟಿನ ಆರೈಕೆಗೆ ಸಂಬಂಧಿಸಿದಂತೆ ನಿಬಂಧನೆಗಳನ್ನು ಹೊಂದಿರುವ ಮೀಸಲು ಕೊಠಡಿ ಸೌಲಭ್ಯ ನೀಡುವುದು. ಈ ಕೊಠಡಿಯು ಸಾಕಷ್ಟು ವಿಶ್ರಾಂತಿ ಸ್ಥಳಾವಕಾಶ ಮತ್ತು ನೈರ್ಮಲ್ಯ ಕರವಸ್ತ್ರದ ಸರಬರಾಜು ಒಳಗೊಂಡಿರಬೇಕು.
- ಬೆಂಗಳೂರು ಶಿಕ್ಷಣ ಕ್ಷೇತ್ರದಲ್ಲಿ ಉಚ್ಛ್ರಾಯದಲ್ಲಿದ್ದು, ಕಡಿಮೆ ವೆಚ್ಚದಲ್ಲಿ ಮಹಿಳೆಯರಿಗೆ ಮೀಸಲಾದ ವಸತಿ ನಿಲಯಗಳನ್ನು ಸ್ಥಾಪಿಸುವುದು.
- ಕಾಲೇಜುಗಳಲ್ಲಿ ಲಿಂಗ ಸಂವೇದನೆ ಮತ್ತು ಜಾಗೃತಿ ಕಾರ್ಯಾಗಾರಗಳನ್ನು ಕಡ್ಡಾಯಗೊಳಿಸುವುದು.
- ವೃತ್ತಿಜೀವನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಬೆಂಬಲ ಮತ್ತು ಮಾರ್ಗದರ್ಶನವನ್ನು ಒದಗಿಸಲು ಪ್ರತಿ ಶಾಲೆ / ಕಾಲೇಜಿನಲ್ಲಿ ಮೀಸಲಾದ ಶಿಕ್ಷಕ ಅಥವಾ ಸ್ವಯಂಸೇವಕರಿರಬೇಕು.

- ಉದ್ಯೋಗಗಳಿಗೆ ಸೇರಲು ಯುವತಿಯರನ್ನು ಉತ್ತೇಜಿಸಲು ಉಪಕ್ರಮಗಳ ಜೊತೆಗೆ ವೃತ್ತಿ ಸಲಹೆ ಮತ್ತು ಕೌಶಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸುವುದು.
- ಸ್ನಾತಕೋತ್ತರ ಪದವಿಯನ್ನು ಅಭ್ಯಾಸ ಮಾಡುತ್ತಿರುವ ಮಹಿಳೆಯರಿಗೆ ಮಾಸಿಕ ಸ್ಟೈಪೆಂಡ್ ಪರಿಚಯಿಸುವುದು.
- ಪೋಲಿಸ್ ಬಲದ ಮಹಿಳೆಯರ ಸಂಖ್ಯೆಯನ್ನು ಹೆಚ್ಚಿಸುವ ಪ್ರಯತ್ನಗಳು

1. ಪೊಲೀಸ್, ಕಾನೂನು ಮತ್ತು ಸಮಾಲೋಚನಾ ಕೇಂದ್ರಗಳು

- ಪೋಲಿಸ್ ಬಲದಲ್ಲಿ ಮಹಿಳೆಯರ ಸಂಖ್ಯೆಯನ್ನು ಹೆಚ್ಚಿಸುವುದು
- ಆರಕ್ಷಕ ಠಾಣೆಗಳಲ್ಲಿ ಮಹಿಳಾ ಮತ್ತು ಮಕ್ಕಳ ಸ್ನೇಹಿ ಮೂಲಭೂತ ಸೌಕರ್ಯಗಳೊಂದಿಗೆ ಮಹಿಳೆಯರು ಮತ್ತು ಮಕ್ಕಳಿಗೆ ನೆರವಾಗುವಂತಹ ಅಗತ್ಯ ಮಾಹಿತಿಗಳ ಪ್ರದರ್ಶನ.
- ಮಹಿಳಾ ಮತ್ತು ಮಕ್ಕಳಿಗೆ ಸಂಬಂಧಿಸಿದ ಪ್ರಕರಣಗಳಿಗೆ ಸಹಾಯ ಮಾಡಲು ಪ್ರತಿ ಪೊಲೀಸ್ ಠಾಣೆಯಲ್ಲಿ ಸಲಹೆಗಾರ / ಬೆಂಬಲ ವ್ಯಕ್ತಿ ನೇಮಿಸುವುದು.

- ನ್ಯಾಯಾಲಯಗಳಲ್ಲಿ ಹಿಂಸಾಚಾರ ಮುಂತಾದ ಪ್ರಕರಣಗಳಲ್ಲಿ ಮೊಕದ್ದಮೆಗಳನ್ನು ಎದುರಿಸುತ್ತಿರುವ ಮಹಿಳೆಯರು ಮತ್ತು ಮಕ್ಕಳಿಗೆ ನೆರವಾಗಲು ಬೆಂಬಲ ವ್ಯಕ್ತಿಗಳನ್ನು ನೇಮಿಸುವುದು.
- ಸಣ್ಣ ವಾಸ್ತವ್ಯ ಮತ್ತು ಪುನರ್ವಸತಿ ಕೇಂದ್ರಗಳ ಸಾಮರ್ಥ್ಯವನ್ನು ಹೆಚ್ಚಿಸುವುದು

1. ಆರ್ಥಿಕ ಸಬಲೀಕರಣ ಅವಕಾಶಗಳು

- ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳನ್ನು ಸ್ಥಾಪಿಸಲು ಮತ್ತು ಸ್ವಯಂ ಉದ್ಯೋಗ ಅವಕಾಶಗಳನ್ನು ಅನ್ವೇಷಿಸಲು ಮಹಿಳಾ ಗುಂಪುಗಳು ಮತ್ತು ವ್ಯಕ್ತಿಗಳಿಗೆ ಸಹಾಯ ಮಾಡಲು ಪ್ರತಿ ವಲಯದಲ್ಲಿ ಉದ್ಯಮಶೀಲತೆ ಬೆಂಬಲ ಕೋಶಗಳನ್ನು ಆರಂಭಿಸುವುದು. ಈ ಕೇಂದ್ರಗಳು ಮಹಿಳೆಯರು ವಾಸಿಸುವ ಸ್ಥಳದ ಸಮೀಪದಲ್ಲಿ ಉದ್ಯೋಗಗಳನ್ನು ಪಡೆಯಲು ಸಹಾಯ ಮಾಡುತ್ತವೆ.
- ವಿಕಲಾಂಗ ವ್ಯಕ್ತಿಗಳಿಗೆ ಉದ್ಯೋಗಿಯಾಗಲು ಅಥವಾ ಸ್ವಯಂ ಉದ್ಯೋಗಿಯಾಗಲು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಮನೆ ಕೆಲಸ ಮಾಡುವ ಮಹಿಳೆಯರಿಗೆ ಸಂಬಂಧಿಸಿದಂತೆ ಸಂಘ/ಜಾಲ ರೂಪಿಸುವುದು. ನಗರ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ಮನೆ ಕೆಲಸಗಾರರಿಗಾಗಿ ಅಗತ್ಯ ಪೊಲೀಸ್ ಪರಿಶೀಲನೆ ನಡೆಸಲು ಮತ್ತು ಇತರ ಪ್ರಯೋಜನ ಕಾರ್ಯಕ್ರಮಗಳನ್ನು ನಡೆಸಲು ನೆರವಾಗುವುದು.

## 5. ಘನತ್ಯಾಜ್ಯ ನಿರ್ವಹಣೆ

5.1 ಆಡಳಿತ ಮತ್ತು ನಾಗರಿಕ ಸೇರ್ಪಡೆ

ಅ. ಬೆಂಗಳೂರು ನಗರದಲ್ಲಿ ತ್ಯಾಜ್ಯ ನಿರ್ವಹಣೆಗೆ ಮೀಸಲಾದ ವಿಶೇಷ ಘಟಕ ರೂಪಿಸುವುದು

ಆ. .ಬೆಂಗಳೂರು ನಗರದಲ್ಲಿ ತ್ಯಾಜ್ಯ ನಿರ್ವಹಣ ಪರಿಪಾಠಗಳನ್ನು ಅಭಿವೃದ್ಧಿಪಡಿಸಲು ಸಂಶೋಧನ ಸಂಸ್ಥೆಗಳಿಗೆ ಸಂಪನ್ಮೂಲಗಳನ್ನು ಒದಗಿಸುವುದು.

ಇ. ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ಯೋಜನೆಗಳ ಟೆಂಡರ್ ಮತ್ತು ವೆಚ್ಚವನ್ನು ಮುಂಗಡವಾಗಿ ಬಹಿರಂಗಪಡಿಸುವುದು.

ಈ.ತ್ಯಾಜ್ಯ ನಿರ್ವಹಣ ಸೇವೆಗಳನ್ನು ಸುಧಾರಿಸಿ ಪರಿಣತಿಯನ್ನು ತರಲು ಸಹಾಯ ಮಾಡುವ ಸಲುವಾಗಿ ತ್ಯಾಜ್ಯ ನಿರ್ವಹಣಾ ಮಂಡಳಿಗೆ ತಾಂತ್ರಿಕ ಸದಸ್ಯರು / ಸಲಹಾ ಗುಂಪುಗಳನ್ನು ನೇಮಿಸುವುದು.

ಉ. ತ್ಯಾಜ್ಯ ನಿರ್ವಹಣೆಯನ್ನು ವಾರ್ಡ್ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಲು ತಜ್ಞರು / ಪರಿಸರ ಎಂಜಿನಿಯರುಗಳನ್ನು ನೇಮಕ ಮಾಡಿಕೊಳ್ಳುವುದು.

ಊ. ಬೆಂಗಳೂರು ನಗರದಲ್ಲಿ ಹಲವಾರು ಮಂದಿ ಪ್ರತಿಭಾವಂತರಿದ್ದು, ಅಂತಹವರನ್ನು ಗುರುತಿಸಿ, ತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿಕೊಳ್ಳುವಂತೆ ಪ್ರೋತ್ಸಾಹಿಸಲು ಕ್ರಮಗಳನ್ನು ತೆಗೆದುಕೊಳ್ಳುವುದು. ಪಾರ್ಶ್ವ ನೇಮಕಾತಿ ಕಾರ್ಯಕ್ರಮಗಳು ಮತ್ತು ಫೆಲೋಶಿಪ್ ಕಾರ್ಯಕ್ರಮಗಳನ್ನು ಆರಂಭಿಸುವ ಮೂಲಕ ನಾಗರಿಕರು ನೇರವಾಗಿ ಬೆಂಗಳೂರು ಅಭಿವೃದ್ಧಿಯಲ್ಲಿ ತೊಡಗಿಕೊಳ್ಳುವ ಅವಕಾಶ ಕಲ್ಪಿಸುವುದು.

ಋ. ವಾರ್ಡ್ ಮಟ್ಟ / ಕ್ಷೇತ್ರದ ಮಟ್ಟ ಮತ್ತು ನಗರ ಮಟ್ಟದಲ್ಲಿ ನಾಗರಿಕರಿಗೆ ಶಿಫಾರಸು ಮಾಡಲಾದ ನಮೂನೆಯಲ್ಲಿನ ತ್ಯಾಜ್ಯ ನಿರ್ವಹಣಾ ದತ್ತಾಂಶ ಒದಗಿಸುವುದು

ಎ. ತ್ಯಾಜ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡದಿರುವುದು ಆರೋಗ್ಯದ ದೃಷ್ಟಿಯಿಂದ ಅಪಾಯಕಾರಿಯಾಗಿದೆ. ಆದುದರಿಂದ ಗುತ್ತಿಗೆದಾರರು, ಸಂಬಂಧಿಸಿದ ಅಧಿಕಾರಿಗಳನ್ನು ತ್ಯಾಜ್ಯ ನಿರ್ವಹಣೆಯ ಅಭ್ಯಾಸಗಳಿಗೆ ವಾರ್ಡ್ ಮಟ್ಟದಲ್ಲಿ ಜವಾಬ್ದಾರರನ್ನಾಗಿಸಬೇಕು. ತ್ಯಾಜ್ಯ ನಿರ್ವಹಣಾ ನಿಯಮಗಳನ್ನು ಉಲ್ಲಂಘಿಸಿದರೆ ಅಂತಹವರ ವಿರುದ್ಧ ಸೂಕ್ತ ದಂಡ,ಮೇಲ್ವಿಚಾರಣೆ, ಗುತ್ತಿಗೆ ರದ್ದತಿ ಮಾಡುವಂತೆ ಘನತ್ಯಾಜ್ಯ ನಿಯಮಗಳನ್ನು ಜಾರಿಗೊಳಿಸಬೇಕು.

5.2 ತ್ಯಾಜ್ಯ ವಿಂಗಡಣೆ ಮತ್ತು ಸಂಗ್ರಹಣೆ:

- ಜನರಲ್ಲಿ ದಿನಂಪ್ರತಿ ಬದಲಾವಣೆಯನ್ನು ತರಲು ಮತ್ತು ಹೊಸ ನಿವಾಸಿಗಳಿಗೆ ವಿಂಗಡಣೆಯ ಪ್ರಾಮುಖ್ಯತೆಯ ಬಗ್ಗೆ ಅರಿವು ಮೂಡಿಸಲು ಮಾಡಲು ನಿರ್ಧಿಷ್ಟ ದಿನದಂದು ಮಾಸಿಕ ನಿರಂತರ ಪ್ರಚಾರ ಕಾರ್ಯಕ್ರಮ ಹಮ್ಮಿಕೊಳ್ಳುವುದು

- ತ್ಯಾಜ್ಯ ಸಂಗ್ರಹಣಾ ವಾಹನಗಳು ಸಮಯ ಚಲನೆಯನ್ನು ಪತ್ತೆಹಚ್ಚಲು ಹಾಗೂ ಅವುಗಳ ಮೇಲೆ ನಿಗಾ ಇಡಲು ವಾಹನಗಳಿಗೆ ಹೈ-ಎಂಡ್ ತಂತ್ರಜ್ಞಾನದ ಜಿಪಿಎಸ್ ಟ್ರಾಕ್ ಅಳವಡಿಕೆ.

- ನೈರ್ಮಲ್ಯ ತ್ಯಾಜ್ಯವನ್ನು ಸಂಗ್ರಹಿಸಲು ಪ್ರಸ್ತುತ ಬೆಂಗಳೂರು ನಗರ ಕೇವಲ ಇಬ್ಬರು ಅನುಮೋದಿತ ಗುತ್ತಿಗೆದಾರರನ್ನು ಹೊಂದಿದೆ. ಇದರಿಂದಾಗಿ ಬೃಹತ್ ತ್ಯಾಜ್ಯ ಉತ್ಪಾದಕರಿಗೆ ನೈರ್ಮಲ್ಯ ತ್ಯಾಜ್ಯ ನಿರ್ವಹಣಾ ವೆಚ್ಚವನ್ನು ಹೆಚ್ಚಿಸಿದೆ. ಬೃಹತ್ ಉತ್ಪಾದಕರು ನೈರ್ಮಲ್ಯ ತ್ಯಾಜ್ಯವನ್ನು ಜವಾಬ್ದಾರಿಯುತವಾಗಿ ನಿರ್ವಹಿಸಲು ಸಹಾಯ ಮಾಡುವ ಸಲುವಾಗಿ ಸ್ಯಾನಿಟರಿ ತ್ಯಾಜ್ಯ ಸಂಗ್ರಹಕ್ಕಾಗಿ ಉಪ-ಗುತ್ತಿಗೆದಾರರನ್ನು ಪರಿಚಯಿಸುವುದು.

- ತ್ಯಾಜ್ಯ ಸಂಗ್ರಹದ ಪ್ರಮಾಣ ಮತ್ತು ಬೇರ್ಪಡಿಕೆ ವಿವರಗಳು ಲಭ್ಯವಾಗುವಂತೆ ಮಾಡುವುದು.

- ಸಣ್ಣ ವಾಹನಗಳಿಂದ ದೊಡ್ಡ ವಾಹನಗಳಿಗೆ ನೇರವಾಗಿ ತ್ಯಾಜ್ಯ ತುಂಬುವಂತಹ ವೈಜ್ಞಾನಿಕ ವರ್ಗಾವಣೆ ಕೇಂದ್ರಗಳನ್ನು ಆರಂಭಿಸುವುದು.

- ಬೇರ್ಪಡಿಸಿದ ತ್ಯಾಜ್ಯವನ್ನು ಸಂಗ್ರಹಿಸಲು ತೀವ್ರತರದಲ್ಲಿ ಗುತ್ತಿಗೆದಾರರು ಮತ್ತು ಪೌರಕಾರ್ಮಿಕರನ್ನು ನೇಮಿಸುವುದು.

- ಹೆಚ್ಚು ಪ್ರಮಾಣದಲ್ಲಿ ತ್ಯಾಜ್ಯ ಉತ್ಪಾದಿಸುವ ಘಟಕಗಳು ತ್ಯಾಜ್ಯ ನಿರ್ವಹಣಾ ಗುತ್ತಿಗೆದಾರರ ಹೆಸರುಗಳನ್ನು ನಿರ್ದಿಷ್ಟ ರೂಪದಲ್ಲಿ ಪ್ರದರ್ಶಿಸುವುದು.

- ಪ್ರತಿ ವಿಧಾನಸಭಾ ಕ್ಷೇತ್ರ/ವಾರ್ಡುಗಳಲ್ಲಿ ಆಯಾ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ಪ್ರಮಾಣವನ್ನು ಆಧರಿಸಿ ತ್ಯಾಜ್ಯ ಸಂಗ್ರಹ ಕೇಂದ್ರಗಳನ್ನು ನಿರ್ಮಿಸುವುದು.

- ತ್ಯಾಜ್ಯ ಪ್ರಕ್ರಿಯೆ

  ಅ. ಬೆಂಗಳೂರಿನಾದ್ಯಂತ ವಿಕೇಂದ್ರೀಕೃತ ತ್ಯಾಜ್ಯ ಸಂಸ್ಕರಣ ಘಟಕಗಳನ್ನು ತೆರೆಯುವುದು. ಆಯಾ ಹಸಿ ತ್ಯಾಜ್ಯ ಮತ್ತು ಗೊಬ್ಬರವನ್ನು ತಯಾರು ಮಾಡುವುದು.

  ಆ.ಒಣ ತ್ಯಾಜ್ಯ ಸಂಗ್ರಹ ಕೇಂದ್ರಗಳು ಪರಿಣಾಮಕಾರಿಯಾಗಿ ಚಲಾಯಿಸಲು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಪಾಲುದಾರರು ಒಣತ್ಯಾಜ್ಯ ಸಂಗ್ರಹಣ ಕೇಂದ್ರಗಳನ್ನು ಅಳವಡಿಸಿಕೊಳ್ಳಲು ನೆರವಾಗುವಂತೆ ಏಕ ಕಿಂಡಿ ವೇದಿಕೆಯನ್ನು ಸ್ಥಾಪಿಸುವುದು. ಉತ್ತಮವಾಗಿ ನಿರ್ವಹಣೆಯ ಒಣತ್ಯಾಜ್ಯ ಸಂಗ್ರಹಣ ಕೇಂದ್ರಗಳಿಗೆ ಪ್ರಶಸ್ತಿಗಳನ್ನು ಪರಿಚಯಿಸುವುದು.

  ಇ.ದೇವಾಲಯಗಳು, ಬಹುಮಹಡಿ ಕಟ್ಟಡಗಳು, ಶೈಕ್ಷಣಿಕ ಸಂಸ್ಥೆಗಳು ಮತ್ತು ಇತರ ಬೃಹತ್ ತ್ಯಾಜ್ಯ ಉತ್ಪಾದಕರಿಗೆ ಸಹಾಯಧನ ಮತ್ತು ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ಪರಿಚಯಿಸುವ ಮೂಲಕ ಸ್ಥಳದಲ್ಲಿಯೇ ಶೂನ್ಯ ತ್ಯಾಜ್ಯ ಯೋಜನೆಯನ್ನುಜಾರಿಗೆ ತರುವುದು.

  ಈ.ರಸ್ತೆಯಲ್ಲಿ ಉದುರುವ ತರಗೆಲೆಗಳನ್ನು ಸುಡುವುದು ಬೆಂಗಳೂರಿನ ಪ್ರಮುಖ ಸಮಸ್ಯೆಯಾಗಿದೆ. ಎಲೆಗಳ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ವಾರ್ಡ್ ಮಟ್ಟದಲ್ಲಿ ಆರಂಭಿಸುವುದು ಮತ್ತು ತ್ಯಾಜ್ಯವನ್ನು ಸುಡುವುದನ್ನು ತಡೆಯಲು ಕ್ರಮಗಳನ್ನು ತೆಗೆದುಕೊಳ್ಳುವುದು. ಉಲ್ಲಂಘನೆಗಾರರ ವಿರುದ್ಧ ತೀವ್ರ ಕ್ರಮ ಕೈಗೊಳ್ಳುವುದು.

  ಉ.ಬೆಂಗಳೂರು ನಗರದಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡುವಂತಹ ತ್ಯಾಜ್ಯವನ್ನು ಉತ್ಪಾದಿಸಲಾಗುತ್ತಿದ್ದು, ಈ ಬ್ಯಾಟರ್ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಗ್ರಹಿಸಿ ನಿರ್ವಹಿಸುವ ಮೂಲಕ ವಿದ್ಯುತ್ ವಾಹನಗಳಿಗೆ ಬಳಕೆಯಾಗುವಂತೆ ವಿದ್ಯುತ್ ಉತ್ಪಾದಿಸಲು ಕ್ರಮಗಳನ್ನು ತೆಗೆದುಕೊಳ್ಳುವುದು.

  ಋ.ಬೆಂಗಳೂರಿನಲ್ಲಿ ಸಾಕಷ್ಟು ನಿರ್ಮಾಣ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಆರಂಭಿಸುವುದು.

5.3 ಶುಚಿತ್ವ (ವಿಜುಯಲ್ ಕ್ಲೀನ್ಲಿನೆಸ್)

ಅ. ಅತಿ ಹೆಚ್ಚು ಕಸ ಬೀಳುವ ರಸ್ತೆಗಳನ್ನು ಹೊಂದಿರುವ ಕಡೆ ಶುಚಿ ಮಾಡಲು ಉತ್ತಮ ಗುತ್ತಿಗೆದಾರರನ್ನು ನೇಮಿಸುವುದು.

ಆ. ಸಿ.ಸಿ.ಟಿ.ವಿ ಬಳಸಿ ಕಸ ಿಸೆಯುವವರಿಗೆ ದಂಡ ವಿಧಿಸುವುದು ಮುಂತಾದ ತೀವ್ರವಾದ ಕ್ರಮವನ್ನು ಪ್ರೋತ್ಸಾಹಿಸುವುದು. ಸಾರ್ವಜನಿಕ ಆರೋಗ್ಯದ ಕಡೆ ಗಮನ ನೀಡುವುದು. ಕಾನೂನು ನಿಯಮಗಳನ್ನು ಬಳಸಿ ಶೂನ್ಯ ಕಸ (ಸಂಚಾರ ಪೊಲೀಸ್ ಕ್ರಮದಂತೆ) ಯೋಜನೆ ಜಾರಿಗೆ ತರುವುದು.

ಇ. ಸಾರ್ವಜನಿಕವಾಗಿ ಪ್ಲ್ಯಾಸ್ಟಿಕ್ ನಿಷೇಧವನ್ನು ಜಾರಿಗೆ ತರಲು ಕಾರ್ಯಯೋಜನೆ.

ಈ. ನಗರ ಯೋಜಕರ ಸಹಾಯದಿಂದ ಮತ್ತು ನಗರ ಪ್ರದೇಶದ ಜಾಗವನ್ನು ಪಡೆದುಕೊಳ್ಳುವುದರೊಂದಿಗೆ ಸೌಂದರ್ಯವರ್ಧನೆಯತ್ತ ಗಮನಿಸುವುದು.

ಉ. ಸ್ವಚ್ಛವಾದ ಪ್ರದೇಶಗಳಿಗೆ ಪ್ರಶಸ್ತಿಗಳನ್ನು ಘೋಷಿಸುವುದು.

5.4 ಪೌರಕಾರ್ಮಿಕರ ರಚನೆ, ಸುರಕ್ಷತೆ ಮತ್ತು ಆರೋಗ್ಯ

ಅ. ಪೌರಕಾರ್ಮಿಕರಿಗೆ ನೇರ ವೇತನ ಪಾವತಿ ವ್ಯವಸ್ಥೆ ಜಾರಿಗೆ ತರುವುದು

ಆ.ಪೌರಕಾರ್ಮಿಕರ ಆರೋಗ್ಯಕ್ಕೆ ಆದ್ಯತೆ ನೀಡುವುದು. ಉಚಿತ ಆರೋಗ್ಯ ವಿಮೆ, ಪೌರ ಕಾರ್ಮಿಕರನ್ನು ನಿಯಮಿತ ಆರೋಗ್ಯ ತಪಾಸಣೆಗೆ ಒಳಪಡಿಸುವುದು.

## ಕೃತಜ್ಞತೆ

**ಉತ್ತಮ ಬೆಂಗಳೂರಿಗಾಗಿ ದುಂಡು ಮೇಜಿನ ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡ ತಜ್ಞರಿಗೆ ನಾವು ಹೃದಯಪೂರ್ವಕವಾಗಿ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ.**

ಆಡಳಿತ

- ವಿ ರವಿಚಂದರ್, ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಫೀಡ್ ಬ್ಯಾಕ್ ಕನ್ಸಲ್ಟಿಂಗ್
- ನಿತಿನ್ ಪೈ, ಸಹ ಸಂಸ್ಥಾಪಕರು, ತಕ್ಷಶಿಲ
- ಮ್ಯಾಥ್ಯೂ ಇಡಿಕುಲ, ಸಂಶೋಧನ ಸಲಹೆಗಾರರು, ಸಿ.ಎಲ್.ಪಿ.ಆರ್

ಚಲನಶೀಲತೆ

- ಡಾ.ಅಶಿಸ್ ವರ್ಮ, ಸಹಾಯಕ ಪ್ರಾಧ್ಯಾಪಕರು, ಐ.ಐ.ಎಸ್.ಸಿ
- ಮುರಳೀಧರರಾವ್, ಪ್ರಜಾರಾಗ್
- ಪವನ್ ಮುಲಿಕುಟ್ಲ, ಮ್ಯಾನೆಜರ್, ನಗರ ಸಾರಿಗೆ, ಡಬ್ಲ್ಯು.ಆರ್.ಐ ಇಂಡಿಯ ಸಸ್ಟೈನಬಲ್ ಸಿಟೀಸ್
- ಆರ್.ಕೆ.ಮಿಶ್ರ, ಸಂಸ್ಥಾಪಕರು, ಸಿ-ಸ್ಮಾರ್ಟ್
- ಸುಹಾಸ್ ನೆರೂಕರ್, ವ್ಯವಸ್ಥಾಪಕ ಟ್ರಸ್ಟಿ, ಸಿ-ಸ್ಮಾರ್ಟ್
- ಸಂಜೀವ್ ದ್ಯಾಮಣ್ಣನವರ್, ನಾಗರಿಕ ಕಾರ್ಯಕರ್ತರು

ನೀರು

- ಅಲೋಕ್ ಪ್ರಸನ್ನ, ಹಿರಿಯ ಪ್ರಾದೇಶಿಕ ಫೆಲೊ, ವಿಧಿ ಸೆಂಟರ್ ಫಾರ್ ಲೀಗಲ್ ಪಾಲಿಸಿ
- ಮೇಘನಾ ದತ್ತಾ, ನಗರ ಯೋಜಕರು
- ಪ್ರವಿಂಜಿತ್ ಕೆ ಪಿ, ವ್ಯವಸ್ಥಾಪಕ ನಿರ್ದೇಶಕರು, ಪರ್ಡಿಜಮ್ ಎನ್ವೈರ್ನಮೆಂಟಲ್ ಸ್ಟ್ರಾಟಜಿಸ್
- ಶರಚ್ಚಂದ್ರ ಲೇಲೆ, ಸೆಂಟರ್ ಫಾರ್ ಎನ್ವೈರ್ನಮೆಂಟಲ್ ಅಂಡ್ ಡೆವೆಲಪ್ಮೆಂಟ್ (ಎಟಿಆರ್ ಇಇ)
- ಶುಭಾ ರಾಮಚಂದ್ರನ್, ವಾಟರ್ ಸಸ್ಟೈನಬಿಲಿಟಿ ಸಲಹೆಗಾರರು
- ತಿಪ್ಪೇಸ್ವಾಮಿ ಎಂಎನ್, ನಿವೃತ್ತ ಮುಖ್ಯ ಅಭಿಯಂತರರು, ಬೆಂಗಳೂರು ಜಲ ಮಂಡಲಿ

ಮಹಿಳಾ ಮತ್ತು ಮಕ್ಕಳ ಸಂರಕ್ಷಣೆ ಮತ್ತು ಅಭಿವೃದ್ಧಿ

- ನೀನಾ ನಾಯಕ್, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಸಂರಕ್ಷಣೆ ಆಯೋಗದ ಮಾಜಿ ಅಧ್ಯಕ್ಷರು
- ಅಶೋಕ್ ಜಿ ವಿ, ಪಾಲುದಾರರು, ಫ್ಯಾಕ್ಟಮ್ ಲಾ
- ಸುಚಿತ್ರಾರಾವ್ ಸಲಹೆಗಾರರು, ಯುನಿಸೆಫ್
- ರೂಪಾಂದೆ ಪದಕಿ, ಪಾಲುದಾರರು, ಪಿ ಅಂಡ್ ಪಿ ಗ್ರೂಪ್
- ಸುಧಾ ತಿಮ್ಮಯ್ಯ, ಮಹಾನಗರಪಾಲಿಕೆ ಸದಸ್ಯರು
- ಕಲ್ಪನಾ ತತ್ತವರ್ತಿ, ಸ್ಥಾಪಕ ನಿರ್ದೇಶಕರು, ಪರಿಟಿ ಕನ್ಸಲ್ಟಿಂಗ್